ಎ) ಸದರಿ ಕಟ್ಟಡವನ್ನು ಪೂರ್ಣಗೊಳಿಸಲು ಬೇಕಾಗುವ ಮೊಬಲಗು ಎಷ್ಟು;

ಏ) ಕಟ್ಟಡದ ಕಳಪೆ ಕೆಲಸ ಕುರಿತು ಸಾರ್ವಜನಿಕ ಉದ್ದಿಮೆಗಳು ಏನಾದರೂ ವರದಿ ನೀಡಿದೆಯೆ;

ಐ) ವಿಳಂಬಕ್ಕೆ ಜವಾಬ್ದಾರರಾದ ಎಲ್ಲರ ಮೇಲೂ ಕ್ರಮ ಕೈಗೊಳ್ಳಲು ಸರ್ಕಾರವು ಯೋಜಿಸಿದೆಯೆ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಮಂತ್ರಿಗಳು):–

ಅ) ಹೌದು

ಆ) 1979 ರಲ್ಲಿ

ಇ) ರೂ. 11,89,548–15

ಈ) ರೂ. 1,06,27,220–31

ಉ) ಪೂರ್ಣಗೊಂಡಿಲ್ಲ.

ಊ) ಗುತ್ತಿಗೆದಾರರಿಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತಕ್ಕೂ ವಿವಾದ ಏರ್ಪಟ್ಟಿದ್ದುದರಿಂದ ಹಾಗೂ ಹಣದ ಅಭಾವದಿಂದ ನಿರ್ಮಾಣ ಕಾರ್ಯವು ಸ್ಥಗಿತಗೊಂಡಿತು.

ಋ) ರೂ. 1,06,27,220–31

ಎ) ರೂ. 50.00 ಲಕ್ಷ

ಏ) ಹೌದು

ಐ) ಹೌದು

ಕೋಲಾರ ಜಿಲ್ಲೆಯಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ

217 (817) ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನಲ್ಲಿ ಅನಧಿಕೃತವಾಗಿ ಸಾರಾಯಿ ಪಾಲಿಥಿನ್ ಪ್ಯಾಕೇಟ್ ತಯಾರಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಲ್ಲದಿದ್ದಲ್ಲಿ, ಸರ್ಕಾರ ಈ ರೀತಿ ಅನಧಿಕೃತವಾಗಿ ಸಾರಾಯಿ ಪ್ಯಾಕೇಟ್ ತಯಾರಿಸಿ ಮಾರಾಟ ಮಾಡುತ್ತಿರುವ ಅಂಗಡಿಗಳ ಪತ್ತೆ ಹಚ್ಚಿ ಅಂತಹವರ ಲೈಸನ್ಸ್‌ಗಳನ್ನು ರದ್ದುಪಡಿಸಿ ಅವರ ಮೇಲೆ ಕ್ರಮ ಕೈಗೊಳ್ಳುವುದೇ;

ಇ) ಬಂಗಾರಪೇಟೆ ತಾಲ್ಲೂಕಿನಲ್ಲಿ ನಡೆಯುತ್ತಿರುವ ಈ ಅಕ್ರಮ ವ್ಯವಹಾರವನ್ನು ಸರ್ಕಾರ ಕೂಡಲೇ ಪತ್ತೆ ಹಚ್ಚಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಹೌದು

ಆ) ಜನವರಿ 93 ಮಾಹೆಯಲ್ಲಿ ಬಂಗಾರಪೇಟೆ. ತಾಲ್ಲೂಕಿನಲ್ಲಿ ಅನಧಿಕೃತವಾಗಿ ಮಾರಾಟ ಮಾಡುತ್ತಿದ್ದ ಸಾರಾಯಿ ಪ್ಯಾಕೇಟ್‌ಗಳನ್ನು ಹಿಡಿದು 10 ಸಾರಾಯಿ ಅಂಗಡಿಗಳ ಮೇಲೆ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಈ ಮೊಕದ್ದಮೆಗಳು ತನಿಖೆಯಲ್ಲಿರುತ್ತವೆ.

ಇ) ಇಂತಹ ಅಕ್ರಮ ವ್ಯವಹಾರಗಳನ್ನು ತಡೆಗಟ್ಟಲಾಗಿದೆ. ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟಿದೆ.

ರಾಜ್ಯದ ದಿನಪತ್ರಿಕೆ ಮತ್ತು ವಾರಪತ್ರಿಕೆ, ಮಾಸಪತ್ರಿಕೆಗಳಿಗೆ ಸರಕಾರದ ಜಾಹೀರಾತು

269 (58) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1990–91, 1991–92ನೇ ಡಿಸೆಂಬರ್ ಅಂತ್ಯದವರೆಗೆ ರಾಜ್ಯದಲ್ಲಿರುವ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳಿಗೆ ಸರ್ಕಾರ ಎಷ್ಟು ಮೊತ್ತದ ಜಾಹೀರಾತು ನೀಡಿದೆ; (ವರ್ಷವಾರು ಎಲ್ಲ ಪತ್ರಿಕೆಗಳ ವಿವರ ನೀಡುವುದು);

ಆ) ರಾಜ್ಯದಲ್ಲಿನ ಕೆಲವು ಸಣ್ಣ ಪತ್ರಿಕೆಗಳಿಗೆ ಜಾಹೀರಾತು ನೀಡುವಾಗ ಕಡಿಮೆ ಮಾಡುವ ತಾರತಮ್ಯ ತೋರಲಾಗುತ್ತದೆಯೆ;

ಇ) ಜಾಹೀರಾತು ನೀಡುವಾಗ ಸರ್ಕಾರ ಪಾಲಿಸುವ ನೀತಿ ನಿಯಮಗಳೇನು;

ಈ) ಮುಂದಿನ ವರ್ಷಗಳಲ್ಲಿ ಈ ತಾರತಮ್ಯ ನಿವಾರಿಸಲು ಏನಾದರೂ ಕ್ರಮ ತೆಗೆದುಕೊಳ್ಳಲಾಗುವುದೇ ?

ಅ) ಜಾಹೀರಾತು ನೀಡಿರುವ ವಿವರ ಈ ಕೆಳಕಂಡಂತಿದೆ:–

1. 1990–91 – ರೂ. 1,00,86,003–00
2. 1991–92 – ರೂ. 1,26,33,827–00
3. ಏಪ್ರಿಲ್ 92 ರಿಂದ ಡಿಸೆಂಬರ್ 92 ರವರೆಗೆ) – ರೂ. 1,97,92,597–00

(ಪತ್ರಿಕಾ ವರ್ಷವಾರು ವಿವರ ಪಟ್ಟಿಯನ್ನು ಲಗತ್ತಿಸಿದೆ)

ಆ) ಇಲ್ಲ.

ಇ) 1980, 1981 ಮತ್ತು 1987ರ ಸರ್ಕಾರದ ಆದೇಶಗಳಲ್ಲಿ ರೂಪಿಸಲಾಗಿರುವ ನಿಯಮಗಳನ್ನು ಪಾಲಿಸಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ.